3. ಪ್ರಶ್ನೋತ್ತರ

(ಅ) ಚುಕ್ಕೆಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದಲ್ಲಿರುವ ನೀರಾವರಿ ಚಾನೆಲ್ ಮುಚ್ಚಿರುವುದು

16(65) ಶ್ರೀ ಸುರೇಶ್ ಗೌಡ (ನಾಗಮಂಗಲ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದಲ್ಲಿರುವ NSL ಸಕ್ಕರೆ ಕಂಪನಿಯವರು ರೈತರ ಜಮೀನುಗಳಿಗೆ ನೀರು ಒದಗಿಸುವ ಚಾನಲ್‌ನ್ನು ಮುಚ್ಚಿ ಹಾಕಿ ಭೂಮಿ ಒತ್ತುವರಿ ಮಾಡಿದ್ದರಿಂದ ನೂರಾರು ರೈತರು ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) 10 ವರ್ಷದಿಂದ ರೈತರಿಗೆ ಆದ ನಷ್ಟವನ್ನು ಈ ಸಕ್ಕರೆ ಕಂಪನಿ ಮೂಲಕ ಭರಿಸಲು ಸರ್ಕಾರ ಮುಂದಾಗುವುದೇ ಹಾಗೂ ಈ ಕಂಪನಿ ವಿರುದ್ಧ ಸರ್ಕಾರವು ಕ್ರಮ ಕೈಗೊಳ್ಳುವುದೇ;

ಇ) ಮುಚ್ಚಿರುವ ಚಾನಲ್‌ನ್ನು ಕೂಡಲೇ ಪುನರ್ ಪ್ರಾರಂಭಿಸಲು ಸರ್ಕಾರ ಕ್ರಮ ವಹಿಸುತ್ತದೆಯೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ಮದ್ದೂರು ತಾಲ್ಲೂಕು, ಕೊಪ್ಪ ಗ್ರಾಮದಲ್ಲಿರುವ ಎನ್.ಎಸ್.ಎಲ್. ಸಕ್ಕರೆ ಕಾರ್ಖಾನೆಯವರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮೂಲಕ ಭೂಸ್ವಾಧೀನಪಡಿಸಿಕೊಂಡಿರುವ ನಾಲೆಯನ್ನು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ನಿಷ್ಕ್ರಯವಾಗಿದ್ದ ಈ ನಾಲೆಯಿಂದ ನೀರೊದಗಿಸಲು ಉದ್ದೇಶಿಸಿದ್ದು ಅಚ್ಚುಕಟ್ಟಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿರುವುದರಿಂದ ರೈತರಿಗೆ ತೊಂದರೆಯಾಗಿರುವುದಿಲ್ಲ.

ಆ) ಸದರಿ ನಾಲೆಯ ಅಚ್ಚುಕಟ್ಟಿಗೆ ಮೇಲೆ ತಿಳಿಸಿರುವಂತೆ ಪರ್ಯಾಯ ವ್ಯವಸ್ಥೆಯ ಮೂಲಕ ನೀರೊದಗಿಸುತ್ತಿರುವುದರಿಂದ ಯಾವುದೇ ಪರಿಹಾರದ ಅಗತ್ಯವಿರುವುದಿಲ್ಲ.

ಇ) ಪರ್ಯಾಯವಾಗಿ ನೀರಿನ ವ್ಯವಸ್ಥೆ ಇದ್ದರೂ ಸಹ ವಿಧಾನ ಸಭಾ ಅರ್ಜಿ ಸಮಿತಿಯ ಸ್ಥಳ ಪರಿವೀಕ್ಷಣಾ ಸಮಯದಲ್ಲಿ ರೈತರ ಕೋರಿಕೆಯ ಮೇರೆಗೆ ಅಧ್ಯಕ್ಷರು ನೀಡಿದ ನಿರ್ದೇಶನದಂತೆ ನಿಷ್ಕ್ರಿಯವಾಗಿರುವ ಈ ನಾಲೆಯಿಂದ ಹೆಚ್ಚುವರಿಯಾಗಿ ದೊರಕಬಹುದಾದ ನೀರನ್ನು ಉಪಯೋಗಿಸಿ

ಕೊಳ್ಳಲು ಈಗಿರುವ ನೀರಿನ ವ್ಯವಸ್ಥೆ ಜೊತೆಗೆ ಉಪಯೋಗಿಸಲು ಅನುವಾಗುವಂತೆ ನಾಲೆಯನ್ನು ಪುನಶ್ಚೇತನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಸುರೇಶ್‌ಗೌಡ: ಸನ್ಮಾನ್ಯ ಅಧ್ಯಕ್ಷರೆ, ಸುಮಾರು 2,000 ದಿಂದ 3,000 ರೈತರಿಗೆ ಅನ್ಯಾಯವಾಗಿರುವ ಬಗ್ಗೆ ಈ ಪ್ರಶ್ನೆ ಇದೆ. ಇಲ್ಲಿ ಕೊಟ್ಟಿರುವ ಉತ್ತರ ಸಚಿವರ ಗಮನಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಕೊಟ್ಟಿರುವ ಉತ್ತರಗಳು ಸಮರ್ಪಕವಾಗಿಲ್ಲ, ಜೊತೆಗೆ ಸತ್ಯಕ್ಕೆ ದೂರವಾಗಿದೆ. ವಿಧಾನಸಭೆಯ ಅರ್ಜಿಗಳ ಸಮಿತಿಯವರು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ, ಚಾನೆಲ್ ಅನ್ನು ಮುಚ್ಚಿರುವುದು ತಪ್ಪು ಎಂದು ಅಧಿಕಾರಿಗಳು ಹೇಳಿದ್ದರು. ಆಗ ಆ ಕಾರ್ಖಾನೆಯವರು ಬಂದು, ಮುಚ್ಚಿ ಹೋಗಿರುವ ಚಾನೆಲ್ ಅನ್ನು ತೆಗೆದು ಕೊಡಲಿಕ್ಕೆ ನಾವು ಸಿದ್ಧರಿದ್ದೇವೆ ಎಂದು ಹೇಳಿದ್ದರು. ಆ ಸಂದರ್ಭದಲ್ಲಿ ತಾವೇ ಅರ್ಜಿಗಳ ಸಮಿತಿಗೆ ಅಧ್ಯಕ್ಷರಾಗಿದ್ದೀರಿ.

12.00 ಪಿ.ಎಂ.

ಆಗ ಒಪ್ಪಿಕೊಂಡಿದ್ದರೂ ಸಹ ತದನಂತರ ಶ್ರೀ ಅಪ್ಪಚ್ಚುರಂಜನ್‌ರವರ ಅಧ್ಯಕ್ಷತೆಯಲ್ಲಿ ಹೋದಂಥ ಸಂದರ್ಭದಲ್ಲಿ ಆ ನಾಲೆಯನ್ನು ತೆಗೆದುಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇವರು ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಆ ನಾಲೆ ನಿಷ್ಕ್ರಿಯವಾಗಿತ್ತೆನ್ನುವ ಸತ್ಯಕ್ಕೆ ದೂರವಾದ ಉತ್ತರವನ್ನಿಲ್ಲಿ ಕೊಟ್ಟಿದ್ದಾರೆ. ಸುಮಾರು 2000-3000 ಎಕರೆ ನೀರಾವರಿ ಪ್ರದೇಶದ ರೈತರಿಗೆ ಸುಮಾರು 8-10 ವರ್ಷಗಳಿಂದ ನೀರು ಹೋಗುತ್ತಿಲ್ಲ. Alternative ಆಗಿ ಕೊಡುತ್ತೇವೆಂದು ಹೇಳುತ್ತಾರೆ. ಆದರೆ, alternative ಆಗಿ ಕೊಡುತ್ತಿರುವ ಜಾಗ ಅದು highly elevated ಜಾಗ. ಇವರೇನು alternative ಮಾಡಿದರೂ ಆ ಜಾಗದಲ್ಲಿ ನೀರು ಕೊಡಲಿಲ್ಲವೆಂದರೆ ಆ ಜಾಗಕ್ಕೆ ನೀರು ಬರಲಿಕ್ಕೆ ಸಾಧ್ಯವಿಲ್ಲ. ತಾವು ಅಲ್ಲಿಗೆ ಬಂದು ವೀಕ್ಷಣೆ ಮಾಡಿದ್ದೀರಿ, ಅದು ತಮ್ಮ ಗಮನಕ್ಕೂ ಬಂದಿದೆ. ಇಂಥ ಸತ್ಯಕ್ಕೆ ದೂರವಾದ ಉತ್ತರ ಕೊಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಅಲ್ಲಿನ ರೈತರಿಗೆ ಅನ್ಯಾಯವಾಗಿದ್ದು, ಪರಿಹಾರ ಕೇಳುತ್ತಿದ್ದಾರೆ. ಪರಿಹಾರ ಕೊಡದಿದ್ದರೂ ಪರವಾಗಿಲ್ಲ, ಆ ಕಾರ್ಖಾನೆಯವರು ನಿಮ್ಮ ಎದುರುಗಡೆಯೇ ಬಂದು ಒಪ್ಪಿಕೊಂಡಿದ್ದಾರೆ. ಆ ಕಾರ್ಖಾನೆಯ ಒಳಗಡೆ channel ಎಷ್ಟು ಉದ್ದವಿದೆ ಅದನ್ನು ಸ್ವಂತ ದುಡ್ಡಿನಿಂದಲೇ ಖರ್ಚು ಮಾಡಿ ಕೆಲಸ ಮಾಡಿಕೊಡುತ್ತೇವೆ, ಹೊರಗಡೆಯದು ಅವರೇ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ, ಅಧಿಕಾರಿಗಳು ಯಾವುದಕ್ಕೂ

ಸ್ಪಂದಿಸುತ್ತಿಲ್ಲ. ಅಲ್ಲಿ ಹೋಗಿ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಿಲ್ಲ. ಜೊತೆಗೆ, ನಾವು ಇಲ್ಲಿ ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ಸತ್ಯಕ್ಕೆ ದೂರವಾದ ಉತ್ತರಗಳನ್ನು ಕೊಟ್ಟಿದ್ದಾರೆ. ತಮಗೆ ಈ ಎಲ್ಲಾ ವಿಚಾರ ಗೊತ್ತಿದೆ. ತಾವು ದಯಮಾಡಿ ಇದನ್ನು ಪರಿಶೀಲನೆ ಮಾಡಬೇಕು. ಮಂತ್ರಿಯವರು ಸ್ಪಷ್ಟವಾಗಿ ಈ ಕೆಲಸವನ್ನು ಎಷ್ಟು ದಿವಸಗಳಲ್ಲಿ ಮಾಡಿಕೊಡುತ್ತಾರೆಂದು ಹೇಳಬೇಕು. 2000-3000 ಎಕರೆ ಪ್ರದೇಶದ ರೈತರಿಗೆ ಅನ್ಯಾಯವಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ಈ channel ಮೊದಲು ಸಣ್ಣ ನೀರಾವರಿ ಇಲಾಖೆಯಡಿಯಲ್ಲಿತ್ತು. 2004ರಲ್ಲಿ ನಮ್ಮ ಇಲಾಖೆಗೆ ವರ್ಗಾವಣೆಯಾದಾಗ ಒಟ್ಟು 2040 ಎಕರೆ ಅಚ್ಚುಕಟ್ಟು ಪ್ರದೇಶವಿದೆ. ಅವರು ಹೇಳಿದ ಹಾಗೆ 2000-3000 ಎಕರೆ ಅಚ್ಚುಕಟ್ಟು ಎನ್ನುವ ಪ್ರಶ್ನೆ ಇಲ್ಲ. HLC ನಾಲೆ ನಿರ್ಮಿಸಿದ ಮೇಲೆ ಸುಮಾರು 300 ಎಕರೆ ಪ್ರದೇಶಕ್ಕೆ ನೀರು ಕೊಡಬೇಕಾಗಿತ್ತು. ಇದನ್ನು 2003ರಲ್ಲಿ KIADB ಯವರು ಆ ಕಾರ್ಖಾನೆ ಸಲುವಾಗಿ ಆ ನಾಲೆ ಸಮೇತವಾಗಿ acquisition ಅನ್ನು ಮಾಡಿಕೊಂಡರು. ಅದಾದಮೇಲೆ, ಆ ಅಚ್ಚುಕಟ್ಟುದಾರರಿಗೆ ತೊಂದರೆಯಾಗುತ್ತದೆಂದು ಬೇರೆ ರೂಪದಲ್ಲಿ ಅವರಿಗೆ ನಾವು ನೀರಾವರಿ ಒದಗಿಸಿದ್ದೇವೆ. ಇದಾದನಂತರ ಸುಮಾರು 125 ಹೆಕ್ಟೇರ್ ಅಂದರೆ 300 ಎಕರೆ ಪ್ರದೇಶಕ್ಕಾದರೂ ನೀರು ಬರುವುದಿಲ್ಲವೆಂದು Petitions Committee ಅಲ್ಲಿಗೆ ಹೋಗಿ ಹೇಳಿದ ಮೇಲೆ ಆ ಕಾಮಗಾರಿಯನ್ನು ತೆಗೆದುಕೊಂಡಿದ್ದೇವೆ. ಆ ಸಕ್ಕರೆ ಕಾರ್ಖಾನೆಯವರಿಂದಲೂ ಅದಕ್ಕೆ ಯಾವುದೇ ರೀತಿಯಾದಂಥ objection ಇಲ್ಲ. ಜೂನ್ ಒಳಗೆ ಆ ನಾಲಾ ಕಾಮಗಾರಿಯನ್ನು ಮುಗಿಸುತ್ತೇವೆ.

ಶ್ರೀ ಸುರೇಶ್‌ಗೌಡ: ಅದು Minor Irrigation ಗೇ ಸೇರಿದೆ ಎಂದು ಅವರು ಹೇಳಿದರು. ಇದು ವಿಶ್ವೇಶ್ವರಯ್ಯ Channel. ವಿಶ್ವೇಶ್ವರಯ್ಯ Channel ಅನ್ನು ಇತ್ತೀಚೆಗೆ ಮಾಡಿದಂಥದ್ದಲ್ಲ. ಸುಮಾರು 50 ವರ್ಷಗಳ ಹಿಂದೆ ಮಾಡಿರುವಂಥದ್ದು. ಹಾಗಾಗಿ, ಇದು Minor Irrigation Department ಅಡಿಯಲ್ಲಿ ಹೇಗೆ ಬರುತ್ತದೆ? ಈ ತಪ್ಪು ಮಾಹಿತಿಯನ್ನು ಅಧಿಕಾರಿಗಳು ಮಂತ್ರಿಯವರಿಗೂ ಸಹ ಕೊಡುತ್ತಿದ್ದಾರೆ. ಇದನ್ನು ನೋಡಿಕೊಂಡು ನಾವು ಹೇಗೆ ಸುಮ್ಮನಿರಬೇಕು? ಇದು ವಿಶ್ವೇಶ್ವರಯ್ಯ Channel. ಈ ವಿಶ್ವೇಶ್ವರಯ್ಯ Channel ಅನ್ನು ಮುಚ್ಚಿರತಕ್ಕಂಥದ್ದು.

ಶ್ರೀ ಬಸವರಾಜ ಬೊಮ್ಮಾಯಿ: ಇದು ತಪ್ಪು ಮಾಹಿತಿಯಲ್ಲ. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಪ್ಪ ಗ್ರಾಮದಲ್ಲಿ ಸಣ್ಣ ನೀರಾವರಿ ಕೆರೆಯು ಸುಮಾರು 200 ವರ್ಷಗಳು ಹಳೆಯದಿದ್ದು, ಇದಕ್ಕೆ ಶಿಂಷಾ ನಾಲೆ ಮತ್ತು ಕೆರಗೋಡು ನಾಲೆಯಿಂದ ಬಸಿ ನೀರಿನಿಂದ ನೀರು ತುಂಬುತ್ತಿದೆ. ಎರಡು ಸಣ್ಣ ಕೆರೆಗಳಿಂದ ಸುಮಾರು 2040 ಎಕರೆ ಅಚ್ಚುಕಟ್ಟು ಪ್ರದೇಶವಿದೆ. ಮೂರು ನಾಲೆ ಎಂದರೆ ಉತ್ತರ ನಾಲೆಯಿಂದ 1300 ಎಕರೆ, ದಕ್ಷಿಣ ನಾಲೆಯಿಂದ 1040 ಎಕರೆ ಹಾಗೂ ಈ ಮಧ್ಯೆ sluice ನಿಂದ 300 ಎಕರೆ ಪ್ರದೇಶಕ್ಕೆ ನೀರನ್ನು ಹರಿಸಲಾಗುತ್ತಿದೆ. ಇದು ವಾಸ್ತವಾಂಶ. ಈ ಕಾಮಗಾರಿಯನ್ನು ಈಗಾಗಲೇ ತೆಗೆದುಕೊಂಡಿದ್ದು, ಜೂನ್ ತಿಂಗಳೊಳಗೆ ಮುಗಿಸುತ್ತೇವೆ.

ಶ್ರೀ ಸುರೇಶ್‌ಗೌಡ: ವಿಶ್ವೇಶ್ವರಯ್ಯ channel ಯಾವಾಗ Minor Irrigation ಗೆ ಸೇರಿಕೊಂಡಿತ್ತು. ಆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಅದನ್ನು ಸ್ವಲ್ಪ control ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ: ಸುರೇಶ್‌ಗೌಡರವರೆ, ನಾನೇ ಬರುತ್ತೇನೆ. ಖುದ್ದು ಪರಿಶೀಲನೆ ಮಾಡೋಣ.

ಶ್ರೀ ಸುರೇಶ್‌ಗೌಡ: Thank you. ಅಧ್ಯಕ್ಷರವರಿಗೆ ಎಲ್ಲಾ ಗೊತ್ತಿದೆ. ಅವರು Petitions Committee ಅಧ್ಯಕ್ಷರಾಗಿ ಅಲ್ಲಿಗೆ ಬಂದಿದ್ದರು.

ಬೀದರ್ ಜಿಲ್ಲೆಯಲ್ಲಿ ಅಂತರ್ಜಲ ನಿರ್ವಹಣೆ

17(57) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಅಂತರ್ಜಲ ನಿರ್ವಹಣೆಯನ್ನು ಸರ್ಕಾರ ಯಾವ ಯಾವ ಯೋಜನೆಗಳಡಿಯಲ್ಲಿ ಕೈಗೊಳ್ಳಲಾಗಿದೆ (ವಿವರಗಳನ್ನು ನೀಡುವುದು);

ಆ) ಅಂತರ್ಜಲ ಯೋಜನೆಯ ನಿರ್ವಹಣೆಯನ್ನು ಯಾವ ಯಾವ ಇಲಾಖೆಗಳು ನಿರ್ವಹಿಸುತ್ತಿವೆ (ವಿವರಗಳನ್ನು ನೀಡುವುದು);

ಇ) ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಅಂತರ್ಜಲದ ಮಟ್ಟ ಯಾವ ಹಂತದಲ್ಲಿದೆ; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಈ) ಕಳೆದ ಎರಡೂವರೆ ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಅಂತರ್ಜಲ ನಿರ್ವಹಣೆಗಾಗಿ ವೆಚ್ಚವಾಗಿರುವ ಮೊತ್ತವೆಷ್ಟು; (ವರ್ಷವಾರು ವಿವರಗಳನ್ನು ನೀಡುವುದು)?